ವಿರಾಜಪೇಟೆ ನಗರದಲ್ಲಿರುವ ಬಡವರಿಗೆ ಆಶ್ರಯ ಯೋಜನೆಯಡಿಯಲ್ಲಿ ಮನೆಗಳ ವಿತರಣೆ.

875 (1337) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ನಗರದಲ್ಲಿರುವ ಬಡವರಿಗೆ ಆಶ್ರಯ ಯೋಜನೆಯಡಿ ಈವರೆಗೆ ಯಾವುದೇ ಮನೆಗಳನ್ನು ವಿವರಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದರೆ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) 1997-98ನೇ ಸಾಲಿನಲ್ಲಿ ಸರ್ಕಾರ ವೀರಾಜಪೇಟೆ ಪಟ್ಟಣಕ್ಕೆ ವಸತಿ ಯೋಜನೆಯಡಿ 50 ಆಶ್ರಯ ಮನೆಗಳ ಗುರಿಯನ್ನು ಕೊಡಲಾಗಿದೆ. ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿರುವ ಪಟ್ಟಣ ವಸತಿ ಸಮಿತಿಯಿಂದ ಈ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಬೇಕಾಗಿದೆ. ಕೂಡಲೇ ವಸತಿ ಸಮಿತಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಅಗತ್ಯ ಸೂಚನೆಗಳನ್ನು ನೀಡಲಾಗುವುದು.

ವಿರಾಜಪೇಟೆಯಲ್ಲಿ ಮಹಿಳೆಯರಿಗೆ ಮಹಿಳ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಸೌಲಭ್ಯ.

876 (1339) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ತಾಲ್ಲೂಕಿನಲ್ಲಿರುವ ಮಹಿಳೆಯರಿಗಾಗಿ ಸರ್ಕಾರವು 1996-97, 1997-98, 1998-99ರ ಸಾಲಿನಲ್ಲಿ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ನೇರ ಮತ್ತು ಬ್ಯಾಂಕ್ ಮೂಲಕ ಸಾಲ ವಿತರಣೆ ಮಾಡಲು ಸರ್ಕಾರ ನಿಗಧಿಪಡಿಸಿದ ಗುರಿ ಎಷ್ಟು; (ವಿವರ ನೀಡುವುದು);

2) ಈ ಅವಧಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಎಷ್ಟು ಮೊತ್ತದ ಹಣವನ್ನು ಸಾಲದ ರೂಪದಲ್ಲಿ ವಿತರಣೆ ಮಾಡಲಾಗಿದೆ (ವಿವರ ನೀಡುವುದು)?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :—

ಅ) ವಿರಾಜಪೇಟೆ ತಾಲ್ಲೂಕಿನಲ್ಲಿರುವ ಮಹಿಳೆಯರಿಗಾಗಿ ಸರ್ಕಾರವು ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ನೇರ ಮತ್ತು ಬ್ಯಾಂಕ್ ಮೂಲಕ ಸಾಲ ವಿತರಣೆ ಮಾಡಲು ಸರ್ಕಾರ 1996-97 ರಿಂದ 1998-99 (29-2-1999)ರವರಿಗೆ ನಿಗಧಿಪಡಿಸಿರುವ ಒಟ್ಟಾರೆ ಸಾಲದ ಗುರಿ ರೂ. 9,65,000 ಮತ್ತು ಸಾಧನೆ 6,27,500 ಆಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆ) 1996-97ನೇ ಸಾಲಿನಿಂದ 1998-99ನೇ ಸಾಲಿನ (28-2-1999)ರವರೆಗೆ 43 ಫಲಾನುಭವಿಗಳಿಗೆ ರೂಪಾಯಿ 6,27,500 ಗಳನ್ನು ಸಾಲದ ರೂಪದಲ್ಲಿ ವಿತರಣೆ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.